


ಮಹಿಳೆಯೊಬ್ಬರು ಮೊಬೈಲ್ ಕಂಪನಿಯ ಕಸ್ಟಮರ್ ಕೇರ್‌ಗೆ ಫೋನ್ ಮಾಡಿ ರೇಗುತ್ತಾ ದೂರಿತ್ತರು.

'ಸಾರ್, ಕಳೆದ ಮೂರು ಗಂಟೆಯಿಂದ ನಿಮ್ಮ ಕಂಪನಿಯ ಇಂಟರ್‌ನೆಟ್ ಕೆಲಸ ಮಾಡುತ್ತಿಲ್ಲ, ಹೇಳಿ ನಾನೇನು ಮಾಡಲಿ?'

'ನೋಡಿ, ಅಷ್ಟರವರೆಗೆ ನೀವು ಮನೆಯ ಅಲ್ಪ ಸ್ವಲ್ಪ ಕೆಲಸವನ್ನಾದರೂ ಮಾಡಬಹುದಿತ್ತು!' ಕಸ್ಟಮರ್ ಕೇರ್‌ನವರು ಮಾರ್ಮಿಕವಾಗಿ ಉತ್ತರಿಸಿದರು.

★ ★ ★

'ಸಾರ್, ನನಗೆ ಯಾವುದಾದರೂ ಕೆಲಸ ಸಿಗುವುದೇ?'

'ಖಂಡಿತ ಸಿಗುತ್ತೆ... ಆದರೆ ಕೆಲಸವಾದ ನಂತರ ಸಂಬಳ ಸಿಗುತ್ತೆ.'

'ಆಗಲಿ.'

'ಹಾಗಾದರೆ ಹೋಗಿ... ನನಗೆ ಮತ್ತು ನಿಮಗೆ ಅಂದರೆ ನಮ್ಮಿಬ್ಬರಿಗೂ ಕೆಲಸವನ್ನು ಹುಡುಕಿಕೊಂಡು ಬನ್ನಿ.'

★ ★ ★

ಮೇಷ್ಟ್ರು: ಯಾರು ಇನ್ನೊಬ್ಬರಿಗೆ ತಮ್ಮ ಮಾತನ್ನು ಅರ್ಥ ಮಾಡಿಸಲು ಸಾಧ್ಯವಿಲ್ಲವೋ, ಅವರು ಮೂರ್ಖರು.

ಗುಂಡ: ಸಾರ್, ನನಗೆ ನಿಮ್ಮ ಮಾತು ಅರ್ಥವಾಗಲಿಲ್ಲ.

★ ★ ★

ಗಂಡ ಕಚೇರಿಯಿಂದ ಹೆಂಡತಿಗೆ ಮೆಸೇಜ್ ಮಾಡಿದ, 'ನನ್ನೆಲ್ಲಾ ಕೊಳಕು ಬಟ್ಟೆಗಳನ್ನು ಒಗೆದು, ಇಸ್ತ್ರಿ ಮಾಡಿ ಇಡು. ಡಿನ್ನರ್‌ಗೆ ನನಗಿಷ್ಟವಾದ ಡಿಶ್‌ಗಳನ್ನು ಮಾಡಿಡು.'

ಸ್ವಲ್ಪ ಹೊತ್ತಿನ ನಂತರ ಗಂಡ ಇನ್ನೊಂದು ಮೆಸೇಜ್ ಮಾಡಿದ, 'ನನಗಿವತ್ತು ಬೋನಸ್ ಸಿಕ್ಕಿದೆ, ನಿನಗೆ ಹೊಸ ಮೊಬೈಲ್ ತರುತ್ತಿದ್ದೇನೆ'

'ಖಂಡಿತವಾಗಿಯೂ...?' ಹೆಂಡತಿ ಖುಷಿಯಿಂದ ಮೊಬೈಲ್‌ನಲ್ಲಿ ಕೇಳಿದಳು.

ಗಂಡ ಮತ್ತೆ ಮೆಸೇಜ್ ಮಾಡಿದ, 'ಖಂಡಿತ ತರುತ್ತಿಲ್ಲ. ನನ್ನ ಮೊದಲ ಮೆಸೇಜನ್ನು ನೀನು ಓದಿದೆಯೋ, ಇಲ್ಲವೋ ಎಂಬುದನ್ನು ಖಚಿತ ಮಾಡಿಕೊಂಡೆ, ಅಷ್ಟೆ!'

★ ★ ★

ಹೆಂಡತಿ ತರಕಾರಿ ಕೊಳ್ಳಲು ಎಷ್ಟು ಜಿಪುಣತನ ಮಾಡುತ್ತಿದ್ದಳೆಂದರೆ, ಗಂಡ ಬೇಸರಿಸುತ್ತಾ ಹೇಳಿದ, 'ಬೇಗ– ಬೇಗ ಕೊಳ್ಳೇ, ಕಚೇರಿಗೆ ತಡವಾಗುತ್ತಿದೆ'

'ನೀವು ಮಧ್ಯೆ ಮಾತನಾಡಬೇಡಿ. ಬೇಗ ಬೇಗ ಅಂತಲೇ ನನಗೆ ನಿಮ್ಮಂಥ ಗಂಡ ಸಿಕ್ಕಿರೋದು. ಈಗ ತರಕಾರಿ ವಿಷಯದಲ್ಲಿ ನಾನು ಅವಸರ ಮಾಡಲ್ಲ!' ಎಂದು ಹೆಂಡತಿ ಮತ್ತೆ ಚೌಕಾಸಿಗೆ ಇಳಿದಳು.

**(ಸಂಗ್ರಹ) ಡಿ.ಎನ್. ಶ್ರೀನಾಥ್**


ಬೇಸಿಗೆಯ ದಿನಗಳು! ಈಗ ಮನೆಯಲ್ಲಿ ಬೇಕು

# ಕೈಲಾಸ ಜೀವನ

ಶಾಂತ, ತಂಪು, ಮಲ್ಟಿಪರ್ಪಸ್ ಆಯುರ್ವೇದಿಕ್ ಕ್ರೀಮ್






। ಕೈ ಕಾಲು ಮತ್ತು ಕಣ್ಣುಗಳ ಉರಿತ ।
। ಮೊಡವೆಗಳು । ಹಿಮ್ಮಡಿಗಳ ಬಿರಿತ ।
। ಮೂಲವ್ಯಾಧಿ । ಕೊಯ್ತ । ಉರಿತ ।
ಮೊದಲಾದವಕ್ಕೆ ಗುಣಕಾರಕ

Available in all medical stores
12g, 20g Tube, 30g, 60g, 120g, 230g Bottle

anunaad.com

I Manufacturer: **ASUM**, Pune. **020-65001785** I Customer Care: Rahul: **94816 00865**, Datta: **0 91300 26068** I **asumkj@gmail.com** I **www.asum.com** I

**Distributor: Yellapur:** Shri Rama Stores: **08419-262180** I **Bangalore:** Mohan Pharma: **080-22874575** I **Mangalore:** Vivek Traders: **0824-2496963** I **Bellary:** Kalwa Agencies: **9379999406** I **Belgaum:** Sharma Medical & Gen. Distributor: **0831-4206784**